**O.S.No.351/2018**
**DW-1**

**<u>ಸಾಕ್ಷಿಯನ್ನು ದಿನಾಂಕಃ 09.12.2025ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>**
**<u>ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ. ಹೆಚ್ ಎಸ್ ಪಿ ವಕೀಲರಿಂದ:</u>**

ದಾವಾ ಆಸ್ತಿಗಳ ಬಗ್ಗೆ ನಾನು ತಿಳಿದುಕೊಂಡಿರುತ್ತೇನೆ. ಈ ದಾವೇಯನ್ನು ಸರ್ವೆ ನಂ.127/3ಡಿಕ್ಕಾಗಿ ಹೂಡಿದ್ದಾರೆ. ಸಾಕ್ಷಿ ಮುಂದುವರೆದು, ಸದರಿ ಆಸ್ತಿ ಅಸ್ತಿತ್ವದಲ್ಲಿ ಇಲ್ಲ, ಅಲ್ಲಿ ಶಾಲೆ , ರಸ್ತೆ , ದೇವಸ್ಥಾನ, ಅರಳಿ ಕಟ್ಟೆ, ಸಿಸಿ ರಸ್ತೆ ಆಗಿ ಹೋಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಶಾಲೆ ರಸ್ತೆ, ಅರಳಿಕಟ್ಟೆಗಳು ಸರ್ವೆ ನಂ.127/3ಡಿ ನಲ್ಲಿ ಬರುತ್ತವೆ. ಸದರಿ ಆಸ್ತಿ ಮೂಲತಃ ಯಾರಿಗೆ ಸೇರಿತ್ತು ಎಂದು ನನಗೆ ಗೊತ್ತಿಲ್ಲ. ಸದರಿ ಆಸ್ತಿಯ ಪಹಣಿಯನ್ನು ನಾನು ನೋಡಿರುವುದಿಲ್ಲ. ಸದರಿ ಸರ್ವೆ ನಂ.127/3ಡಿ ನಲ್ಲಿ 34 ಗುಂಟೆಗಾಗಿ ದಾವೇ ಹೂಡಿದ್ದು, ಆದರೆ ಅಲ್ಲಿ ಜಾಗ ಯಾವುದು ಇರುವುದಿಲ್ಲ. ಸರ್ವೆ ನಂಬರ್ ಬಗ್ಗೆ ನಾನು ಈ ದಾವೇಯನ್ನು ನೋಡಿ ತಿಳಿದುಕೊಂಡಿರುತ್ತೇನೆ. ವಾದಿ ಈ ದಾವೇಯಲ್ಲಿ ಏನು ದಾಖಲೆಗಳನ್ನು ಹಾಜರುಪಡಿಸಿದ್ದರೆ ಎಂದು ತಿಳಿದುಕೊಂಡಿರುತ್ತೇನೆ. ದಾವಾ ಆಸ್ತಿಯ ಚೆಕ್ಕುಬಂದಿ ಎಂದರೆ ಸಾಕ್ಷಿಯು ಅಸ್ತಿತ್ವದಲ್ಲಿ ಇರದ ಕಾರಣ, ಇರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿ ಅಸ್ತಿತ್ವದಲ್ಲಿ ಇಲ್ಲ ಎಂದು 1ನೇ ಪ್ರತಿವಾದಿ ಹೇಳಿಕೊಟ್ಟಿರುತ್ತಾರೆ. ನನ್ನ ತಂದೆ ಆ ರೀತಿ ಹೇಳಿದ ನಂತರ ನಾನು ದಾಖಲೆಗಳನ್ನು ಪರಿಶೀಲನೆ ಮಾಡಿರುತ್ತೇನೆ. ಆ ರೀತಿ ಯಾವ ದಾಖಲೆಗಳನ್ನು ಪರಿಶೀಲನೆ ಮಾಡಿರುತ್ತೇನೆ ಎಂದು ನನಗೆ ಹೇಳಲು ಬರುವುದಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.**

*<u>( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)</u>*

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ .ದಂ .
ಕುಣಿಗಲ್.